## ಸ್ಪರ್ಧೆಯಲ್ಲಿ ಉತ್ತರವೇ ಇಲ್ಲದ ಪ್ರಶ್ನೆ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಧಾರಾವಾಹಿ, ರಿಯಾಲಿಟಿ ಶೋಗಳಿಗೆ ವೀಕ್ಷಕರನ್ನು ಸೆಳೆಯಲು ಬಹುಮಾನದ ಭರಾಟೆ ಜೋರಾಗಿ ನಡೆಯುತ್ತಿದೆ. 'ವಧು', 'ಯಜಮಾನ' ಹೊಸ ಕಥೆಯನ್ನು ಕಿರುತೆರೆಗೆ ತಂದಿರುವುದು ಸ್ವಾಗತಾರ್ಹ. ಆದರೆ, ಧಾರಾವಾಹಿಗಳ ಅಂತ್ಯದಲ್ಲಿ ಕೇಳುವ ಪ್ರಶ್ನೆಗೆ ಸರಿ ಉತ್ತರದ ಮೊಬೈಲ್ ಸಂಖ್ಯೆಗೆ ಮಿಸ್ಡ್ ಕಾಲ್ ಕೊಟ್ಟ ಅದೃಷ್ಟಶಾಲಿ ವಿಜೇತರಿಗೆ ಗ್ಲಾಸ್ ಟಾಪ್ ಸ್ಟೌವ್, ವಾರಪೂರ್ತಿ ಆಡಿ ಗೆದ್ದ ಒಬ್ಬ ಮಹಾ ಅದೃಷ್ಟಶಾಲಿಗೆ ಡಬಲ್ ಡೋರ್ ರೆಫ್ರಿಜರೇಟರ್ ನೀಡುವ ಬಗ್ಗೆ ಹೇಳಿದರು. ಮರುದಿನ ವಿಜೇತರ ಹೆಸರು, ಊರು ಪ್ರಕಟಿಸಿದರು. ಮೊದಲು ಈ ವಿವರ ನೀಡುತ್ತಿರಲಿಲ್ಲ. ಈ ಸ್ಪರ್ಧೆಯಲ್ಲಿ ನಡೆದ ಒಂದು ವಿಚಿತ್ರ ಘಟನೆ ಎಂದರೆ, 'ಯಜಮಾನ'ದಲ್ಲಿ ಝಾನ್ಸಿ ಜೊತೆ ಕಾಂಟ್ರಾಕ್ಟ್ ಮದುವೆಯಾಗಲು ರಾಘವೇಂದ್ರನಿಗೆ ಒಡ್ಡಲಾದ ಹಣದ ಆಮಿಷ ಎಷ್ಟು ಎನ್ನುವ ಪ್ರಶ್ನೆಗೆ – 1 ಕೋಟಿ ರೂಪಾಯಿ, 75 ಲಕ್ಷ ರೂಪಾಯಿ ಎನ್ನುವ ಆಯ್ಕೆಗಳನ್ನು ಕೊಟ್ಟಿದ್ದರು. ಆದರೆ ಅವತ್ತಿನ ಕಂತಿನಲ್ಲಿ ಎಷ್ಟು ಹಣ ನೀಡಬೇಕು ಎನ್ನುವ ಬಗ್ಗೆ ಪ್ರಸ್ತಾಪವೇ ಆಗಿರಲಿಲ್ಲ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಡೈಲಾಗ್ ಒಂದೇ, ಧಾರಾವಾಹಿ ಹಲವು

ಕನ್ನಡ ಧಾರಾವಾಹಿಗಳ ಬಹುತೇಕ ಸಂಭಾಷಣೆಯಲ್ಲಿ ಏಕರೂಪತೆ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ 'ಸದ್ಯಕ್ಕೆ ಈ ವಿಷಯ ಯಾರಿಗೂ ಹೇಳೋದು ಬೇಡ', 'ನನ್ನಿಂದಾಗಿ ಮನೆಯ ಶಾಂತಿ ಹಾಳಾಗಲು ಬಿಡಲ್ಲ', 'ನಾಳೆ ಸಂಜೆಯೊಳಗೆ ಇದಕ್ಕೆ ಒಂದು ಗತಿ ಕಾಣಿಸಿಬಿಡುತ್ತೇನೆ', 'ಈ ಪೀಡೆ ಇನ್ನೂ ಕಾಡ್ತಾನೇ ಇದೆ', 'ತಾಳಿ ಕಟ್ಟಿದ ಮಾತ್ರಕ್ಕೆ ನನ್ನ ಗಂಡ ಆಗಕ್ಕೆ ಸಾಧ್ಯ ಇಲ್ಲ', 'ಇದನ್ನೆಲ್ಲಾ ನಿಮಗೆ ಹೇಳಿ ಬಿಡಬೇಕೆಂದು ಅಂದುಕೊಂಡೆ', 'ಮರ್ಯಾದೆಗೆ ಅಂಜುವ ಮನೆತನ', 'ಹೆಣ್ಣು ಕುಲಕ್ಕೇ ಕಳಂಕ ತರುವ', 'ಇದರ ಹಿಂದೆ ಯಾರು ಇದ್ದಾರೆ ಎಂದು ನನಗೆ ಗೊತ್ತು', 'ನಿಮಗೆ ಕೈ ಮುಗೀತೀನಿ, ಈ ವಿಷಯ ಯಾರಿಗೂ ಹೇಳಬೇಡಿ', 'ಅಯ್ಯೋ ಭಗವಂತ, ಇನ್ನೂ ನನ್ನನ್ನು ಯಾಕಪ್ಪಾ ಈ ಭೂಮಿ ಮೇಲೆ ಇಟ್ಟಿದ್ದೀಯಾ?' – ಹೀಗೆ ಹಲವು ವಾಕ್ಯಗಳು ಎಲ್ಲ ಧಾರಾವಾಹಿಗಳಲ್ಲೂ ಬರುತ್ತಲೇ ಇರುತ್ತವೆ.

ಕೆಲವೊಂದು ನೀಚ ಕ್ರಿಯೆಗಳೂ ಸಾಮಾನ್ಯವಾಗಿ ಒಂದೇ ರೀತಿ ಬರುತ್ತವೆ. ಇದನ್ನು ನೋಡಿದರೆ 'ದೇವನೊಬ್ಬ ನಾಮ ಹಲವು' ಅನ್ನುವ ರೀತಿ 'ಡೈಲಾಗ್ ಒಂದೇ ಧಾರಾವಾಹಿ ಹಲವು' ಎಂದು ಪರಿವರ್ತನೆ ಮಾಡಿಕೊಳ್ಳಬಹುದು ಎಂದು ಇಂತಹ ಸಂಭಾಷಣೆ ಎಂಬ ಮಸಾಲೆ ಮಾತನ್ನು ಕೇಳಿದಾಗ ಅನ್ನಿಸುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

**ವಾರದ ಪತ್ರ**

## ಸ್ನೇಹ ಎಂದರೆ ಇದೇ...

'ಫ್ರೆಂಡ್‌ಶಿಪ್ ಡೇ' ಅದು ಇದು ಅಂತ ಜನ ಆಚರಿಸುತ್ತಾರೆ. ಆದರೆ ಇದ್ಯಾವುದೂ ಗೊತ್ತಿಲ್ಲದ ಒಬ್ಬ ಮುಗ್ಧ ಮನಸ್ಸಿನ ಯುವಕ ಕಲರ್ಸ್ ಕನ್ನಡದ 'ಬಿಗ್ ಬಾಸ್' ಮನೆಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದು, ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡದ್ದು ವಿಸ್ಮಯವೇ ಸರಿ. ನಿಜವಾದ ಸ್ನೇಹ ಎಂದರೆ ಏನು ಅಂತ ಧನರಾಜ್ ಮತ್ತು ಹನುಮಂತ ತೋರಿಸಿಬಿಟ್ಟರು. ತನ್ನ ಸ್ನೇಹಿತ ಅಂತ ಅವನನ್ನು ಉಳಿಸಿಕೊಳ್ಳದೆ ನಾಮಿನೇಟ್ ಮಾಡಿದ ಪ್ರಥಮ ವ್ಯಕ್ತಿ ಹನುಮಂತ. ತಾನು ಗೆದ್ದು ಬಂದ ಮೇಲೂ ಧನರಾಜ್ ಕೈಗೆ ತನ್ನ ಟ್ರೋಫಿ ಕೊಟ್ಟು ಸಂತೋಷ ಹಂಚಿಕೊಂಡರು. ಧನರಾಜ್ ತನ್ನ ದೋಸ್ತ್ 'ಬಿಗ್ ಬಾಸ್' ಕಪ್ ಗೆದ್ದಾಗ ತಾನೇ ಗೆದ್ದಷ್ಟು ಸಂಭ್ರಮಿಸಿದರು.

—ಶ್ರುತಿ ಎಸ್., ಬೆಂಗಳೂರು

## ಬಡತನದ ವೈಭವೀಕರಣ ಸರಿಯಲ್ಲ




ಝೀ ಕನ್ನಡದ 'ಸರಿಗಮಪ' ಕಾರ್ಯಕ್ರಮ ಬಹಳಷ್ಟು ಪ್ರತಿಭೆಗಳಿಗೆ ಅವಕಾಶ ಕೊಡುತ್ತಿದೆ. ಆದರೆ, ಸ್ಪರ್ಧಿಗಳ ಬಡತನವನ್ನು ಅಲ್ಲಿ ವೈಭವೀಕರಿಸುವುದು ಸರಿಯಲ್ಲ. ದ್ಯಾಮೇಶ ಎಂಬ ಸ್ಪರ್ಧಿ ತೊಟ್ಟಿದ್ದ ಅಂಗಿ ಹರಿದಿತ್ತು. ಅದನ್ನು ಮತ್ತೆ ಮತ್ತೆ ಕ್ಯಾಮೆರಾ ಫೋಕಸ್ ಮಾಡಿ ತೋರಿಸಿದರು. ಅವರಿಗೆ ಹೊಸ ಬಟ್ಟೆಯನ್ನು ಕೊಟ್ಟಿದ್ದನ್ನೂ ಪ್ರಚಾರ ಮಾಡಿದರು. ಕೊಟ್ಟವರು ಹೆಮ್ಮೆಯಿಂದ ಬೀಗಬಹುದು. ಪಡೆದವರು ಸಂಕೋಚದಿಂದ ಕುಗ್ಗಬಹುದು. ಇದು ಒಂದು ರೀತಿ ಬಡತನವನ್ನು ಆಡಿಕೊಂಡಂತೆ ಎಂದು ಅನ್ನಿಸಿತು.

—ಬಸವರಾಜ್ ಬಿ., ಹರಿಹರ

ಝೀ ಕನ್ನಡದ 'ಸರಿಗಮಪ' ಕಾರ್ಯಕ್ರಮ ವಿಶೇಷವಾಗಿ ರಂಜಿಸಿತು. ನಟಿಯರಾದ ಸುಧಾರಾಣಿ, ತಾರಾ, ಶ್ರುತಿ ಆಹ್ವಾನಿತರಾಗಿದ್ದು ವಿಶೇಷವಾಗಿತ್ತು. ಗಾಯಕರು ಈ ತಾರೆಯರು ನಟಿಸಿದ ಸಿನಿಮಾಗಳ ಹಾಡುಗಳನ್ನು ಸೊಗಸಾಗಿ ಹಾಡಿದರು. ಸ್ಪರ್ಧಿ ದ್ಯಾಮೇಶ ಹಾಡಿದ ಪರಿ ವೀಕ್ಷಕರನ್ನು ಭಾವಲೋಕಕ್ಕೆ ಕರೆದುಕೊಂಡು ಹೋಯಿತು. ತಾರಾ ಅವರು ಒಂದು ಕ್ಷಣ ಕಣ್ಣೀರಾದ ಸನ್ನಿವೇಶ ನಮ್ಮನ್ನೂ ಮೂಕರನ್ನಾಗಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

## ಜನಪದ ಸೊಗಡಿನ ಚಂದನ

ಚಂದನದಲ್ಲಿ ಮೂರು ಕಂತಿನಲ್ಲಿ ಪ್ರಸಾರವಾದ ಸಂಕ್ರಾಂತಿ ವಿಶೇಷದ 'ಥಟ್ ಅಂತ ಹೇಳಿ' ಕಾರ್ಯಕ್ರಮ ತುಂಬಾ ಇಷ್ಟವಾಯಿತು. ಮಾಹಿತಿಪೂರ್ಣವಾಗಿದ್ದ ಕಾರ್ಯಕ್ರಮ ಹಬ್ಬದ ಆಚರಣೆಯ ಹಿನ್ನೆಲೆಯನ್ನು ಮನದಟ್ಟು ಮಾಡಿತು. ಕಾಡುಶಿವನಹಳ್ಳಿ ಮತ್ತು ಕೇತುಮಾರನಹಳ್ಳಿ ನಾಗರಿಕರ ಜೊತೆ ನಡೆಸಿದ ಮಾತುಕತೆ ಜನಪದರಿಗೆ ನೀಡಿದ ಮನ್ನಣೆ ಎಂದೆನಿಸಿತು. ಹಳ್ಳಿಯ ಬದುಕಿನ ಮಾಹಿತಿ ಮತ್ತು ಸಾಂಸ್ಕೃತಿಕ ವಿವರವನ್ನು ಇದು ನೀಡಿತು.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಶಾಸ್ತ್ರೀಯ ಸಂಗೀತದ ಹಿರಿಮೆ

ಚಂದನದ 'ಶುಭೋದಯ ಕರ್ನಾಟಕ'ದಲ್ಲಿ ನಂದಿನಿ ರಾವ್ ಅವರ ಸಂದರ್ಶನ ಅದ್ಭುತವಾಗಿತ್ತು. ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ 15 ಭಾಷೆಗಳಲ್ಲಿ ಸುಲಲಿತವಾಗಿ ಸುಮಧುರವಾಗಿ ಹಾಡುವ ನಂದಿನಿ ಅವರಿಗೆ ಮತ್ತು ಅವರನ್ನು ಪರಿಚಯಿಸಿದ ಚಂದನ ವಾಹಿನಿಯನಿಗೆ ಧನ್ಯವಾದ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಅಪ್ಪಟ ರಂಜನೀಯ ಕಾರ್ಯಕ್ರಮ

ಚಂದನದ 'ಗಾನ ಗರಡಿ'ಯಲ್ಲಿ ಜನಪದ ಗೀತೆಗಳ ಪ್ರಸ್ತುತಿ ಆ ಕಾರ್ಯಕ್ರಮಕ್ಕೆ ಒಂದು ಮೆರುಗು ತುಂಬುತ್ತಿದೆ. ಇತ್ತೀಚೆಗೆ ಇಬ್ಬರು ಗಾಯಕಿಯರು 'ದುಂಡು ಮಲ್ಲಿಗೆ ಸೂಜಿ ಮಲ್ಲಿಗೆ' ಎನ್ನುವ ಉತ್ತಮ ಗೀತೆಯನ್ನು ಹಾಡಿ ರಂಜಿಸಿದರು. ಕಡಬಗೆರೆ ಮುನಿರಾಜು ಒಂದಿಷ್ಟು ಹಾಸ್ಯಮಿಶ್ರಿತ ಅನುಭವಗಳನ್ನು ಹಂಚಿಕೊಂಡು ಮತ್ತಷ್ಟು ಕಳೆಗಟ್ಟಿಸಿದರು. ವಾದ್ಯವೃಂದದ ಸಹಕಾರ ಅದ್ಭುತ. ಅಪ್ಪಟ ಮನರಂಜನೆಯ ಈ ಕಾರ್ಯಕ್ರಮವನ್ನು ತಪ್ಪದೇ ನೋಡುತ್ತೇನೆ.

—ಡಿ. ಶ್ರೀಕಾಂತ್, ಬೆಂಗಳೂರು

## ಹೊಸ ಕಥೆಗಳು ಯಾಕಿಲ್ಲ?

ಕಲರ್ಸ್ ಕನ್ನಡದ 'ವಧು' ಮತ್ತು 'ಯಜಮಾನ' ಧಾರಾವಾಹಿಗಳು ಹತ್ತರಲ್ಲಿ ಮತ್ತೊಂದು ಎನ್ನುವಂತೆ ಇವೆ. ಮೊದಲನೆಯದರಲ್ಲಿ ಡೈವೋರ್ಸ್ ಮುಖ್ಯ ವಿಷಯ. ಇನ್ನೊಂದರಲ್ಲಿ ಕಾಂಟ್ರಾಕ್ಟ್ ಗಂಡ! ಅದೇ ಕಥೆಯ ಸಿನಿಮಾಗಳು ಈಗಾಗಲೇ ಬಂದಿವೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು